# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/96/15-16

ದಿನಾಂಕ :26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಶಾಂತಮ್ಮ ಗಂಡ ಲೇಟ್ ಕಲ್ಲಪ್ಪ, ಸಾ\|\|ಸಿಂಧುವಾಳ ಗ್ರಾಮ, ತಾ\|\|ಬಳ್ಳಾರಿ<br><br>**ಶ್ರೀ ಡಿ ನಾರಾಯಣ, ವಕೀಲರು, ಬಳ್ಳಾರಿ** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಮೋಕಾ<br>3. ಗ್ರಾಮ ಲೆಕ್ಕಾಧಿಕಾರಿಗಳು, ಸಿಂಧುವಾಳ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಸಿಂಧುವಾಳ | 369E/2 | 1.24 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂಖ್ಯೆ: ಕಂ/ಪಹಣಿ/864/2011-12 ದಿನಾಂಕ: 18-09-2014 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 30-10-2015, 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಸಿಂಧುವಾಳ ಗ್ರಾಮದ ಸ.ನಂ 369E/2 ವಿಸ್ತೀರ್ಣ: 1.25 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂಖ್ಯೆ: ಕಂ/ಪಹಣಿ/864/2011-12 ದಿನಾಂಕ: 18-09-2014 ರಲ್ಲಿ ಪಹಣಿ, ಕ್ರಯಪತ್ರ ಮತ್ತು ಈ.ಸಿ ಗಳ ವಿಸ್ತೀರ್ಣಗಳು ವ್ಯತ್ಯಾಸವಿರುವುದು ಕಂಡುಬಂದಕಾರಣ ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿಕೊಳ್ಳುವಂತೆ ತಿಳಿಸಿ ನೀಡಿದ ಹಿಂಬರವನ್ನು ಪ್ರಶ್ನಿಸಿರುತ್ತಾರೆ.

ಮುಂದುವರೆದು ವಾದಿಗಳು ಸದರಿ ಜಮೀನಿನ ಕ್ರಯದಾರಳಾಗಿದ್ದು, ಸದರಿಜಮೀನನ್ನು ಮೇಲಗಮನವಿದಾರಳಾದ ಶ್ರೀಮತಿ ಶಾಂತಮ್ಮ ಇವರ ಗಂಡನಾದ ಲೇಟ್ ಕಲ್ಲಪ್ಪ ಇವರು ಶ್ರೀಮತಿ ರಾಜೇಶ್ವರಿ ಗಂಡ ಜಯದೇವ್ ಸಾಸನೂರು ಇವರಿಂದ ನೊಂದಾಯಿತ ಕ್ರಯ ಪತ್ರ ಸಂಖ್ಯೆ 4259/80-81 ದಿನಾಂಕ 12-01-1981 ರಲ್ಲಿ ಸ.ನಂ 369E/2 ವಿಸ್ತೀರ್ಣ 1.25 ಎಕರೆಜಮೀನನ್ನು ಪಡೆದಿರುತ್ತಾರೆ. ಶ್ರೀಮತಿ ರಾಜೇಶ್ವರಿ ಇವರು ಸದರಿ ಜಮೀನನ್ನು ಶ್ರೀ ಎಸ್.ಲಿಂಗಾರೆಡ್ಡಿ ಇವರಿಂದ ನೊಂದಾಯಿತ ಕ್ರಯ ಪತ್ರಸಂಖ್ಯೆ 958/78-79 ದಿನಾಂಕ 06-07-78 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ಆದರೆ ಈ ಎರೆಡು ಕ್ರಯಗಳು ದಾಸ್ತವೇಜು ವ್ಯತ್ಯಾಸದಕಾರಣ ಹಕ್ಕುಬದಲಾವಣೆಯಾಗಿರುವುದಿಲ್ಲ. ಕಾರಣ ಮೇಲ್ಮನವಿದಾರರು ನೊಂದಾಯಿತ ಕ್ರಯಪತ್ರದನ್ವಯ ಪಹಣಿಯಲ್ಲಿ ಹಕ್ಕುದಾಖಲಿಸಿಕೊಡುವಂತೆ ಕೋರಿ ಮೇಲ್ಮನವಿಸಲ್ಲಿಸಿರುತ್ತಾರೆ.